

ಒಂದು ಮನೆಯಲ್ಲಿ ಒಂದು ನಾಯಿ ಮತ್ತು
ಒಂದು ಬೆಕ್ಕು ಇತ್ತು
ಬೆಕ್ಕಿಗೆ ನಾಯಿಯನ್ನು ಕಂಡರೆ
ಇಷ್ಟವಿರಲಿಲ್ಲ. ಅದು ನಾಯಿಯನ್ನು
ಹಂಗಿಸುತ್ತಿತ್ತು. “ನನ್ನನ್ನು ಮನೆಯೊಳಗೆ
ಇಟ್ಟುಕೊಳ್ಳುತ್ತಾರೆ. ನೀನು ಮಾತ್ರ ಎಂಜಲು
ನೆಕ್ಕುವವನು. ನಿನ್ನನ್ನು ಯಾವಾಗಲೂ
ಹೊರಗೆ, ಬೂದಿಯ ರಾಶಿಯ ಹತ್ತಿರ
ಕಟ್ಟುತ್ತಾರೆ”ಎಂದು ಬೆಕ್ಕು ನಾಯಿಗೆ
ಹೇಳುತಿತ್ತು.
ಒಂದು ದಿನ ಅಡಿಗೆ ಮನೆಯಲ್ಲಿ
ಘಮ್ಮೆನ್ನುವ ಪರಿಮಳ ಬರುತಿತ್ತು..
ಆ ಪರಿಮಳ ನಾಯಿಯ ಮೂಗಿಗೆ ಬಡಿದು,
ಅದಕ್ಕೆ ಚಾಪಲ್ಯದಿಂದ ಮಲಗಲು ಕೂಡ
ಆಗಲಿಲ್ಲ.

ನಾಯಿ ಮೆಲ್ಲನೆ ಬೆಕ್ಕನ್ನು ಕರೆದು ಕೇಳಿತು “ಬೆಕ್ಕಕ್ಕಾ, ಅಡಿಗೆ ಮನೆಯಲ್ಲಿ ಏನು ಅಷ್ಟು ಸುವಾಸನೆ ಬರುತ್ತಿದೆ?”
ಬೆಕ್ಕು ಹೇಳಿತು “ಇವತ್ತು ಅಪ್ಪದ ತಿಂಡಿ ಮಾಡುತ್ತಿದ್ದಾರೆ. ಆದರೆ ಅದು ನಿನಗಾಗಿ ಅಲ್ಲ!”ನಾಯಿ ಆಸೆಯಿಂದ ಕೇಳಿತು “ಸ್ವಲ್ಪ ಕೊಡ್ತೀಯಾ?” ಬೆಕ್ಕು ಕುತಂತ್ರದಿಂದ ಹೇಳಿತು “ಎಲ್ಲರೂ ಊಟ ಮಾಡಿ ಮಲಗಿದ ಮೇಲೆ ಬಾ. ನಿನ್ನನ್ನು ಒಳಗೆ ಕರೆದುಕೊಂಡು ಹೋಗುತ್ತೇನೆ. ನಿನಗೆ ಬೇಕಾದಷ್ಟು ತಿನ್ನಬಹುದು.” ರಾತ್ರಿ ಎಲ್ಲರೂ ಮಲಗಿದ ಮೇಲೆ,ನಾಯಿ ಬೆಕ್ಕಿನ ಜೊತೆಗೆ ಅಡಿಗೆ ಮನೆಗೆ ಹೋಯಿತು.ಬೆಕ್ಕು ತೋರಿಸಿದ ಪಾತ್ರೆಯಲ್ಲಿದ್ದ ಅಪ್ಪವನ್ನು ನಾಯಿ ತುಂಬಾ ತಿಂದಿತು.ಬೆಕ್ಕು ಕೂಡ ಚೆನ್ನಾಗಿ ತಿಂದು “ಮಿಯಾಂವ್” ಎಂದು ಶಬ್ದ ಮಾಡಿತು.
ಆ ಶಬ್ದ ಕೇಳಿ ಮನೆಯವರು ಕೋಲು ಹಿಡಿದು ಬಂದರು. ಬೆಕ್ಕು ತಕ್ಷಣ ಕಿಟಕಿಯಿಂದ ಹಾರಿ ಓಡಿ ಹೋಯಿತು. ಪಾಪ! ನಾಯಿಗೆ ಓಡಿಹೋಗಲು ದಾರಿ ಇರಲಿಲ್ಲ. ಮನೆಯೊಡತಿ ಬಾಗಿಲಲ್ಲಿ ನಿಂತು ನಾಯಿಗೆ ಚೆನ್ನಾಗಿ ಹೊಡೆದಳು. ನಾಯಿ ನೋವಿನಿಂದ ಅಳುತ್ತಾ ಅಂಗಣಕ್ಕೆ ಓಡಿ ಹೋಯಿತು. ಆ ದಿನದಿಂದ ನಾಯಿ ಹೇಳುತ್ತಿತ್ತು ಬದುಕುವುದಾದರೆ ಎಲೆ ನೆಕ್ಕಿಯಾದರೂ ಬದುಕುತ್ತೇನೆ. ಆದರೆ ಬೆಕ್ಕಿನ ಜೊತೆ ಸೇರಿ ಅಪ್ಪದ ತಿಂಡಿ ಮಾತ್ರ ತಿನ್ನುವುದಿಲ್ಲ!”

ನೀತಿ

ಗೆಳೆತನ ಮಾಡುವಾಗ ಜಾಗ್ರತೆ ಬೇಕು. ಕೆಟ್ಟವರ ಜೊತೆ ಸೇರಿದರೆ ಕಷ್ಟ ತಪ್ಪದು.